**RR + PR**

ಸಂಕೇತ ಸಂಖ್ಯೆ : **85-K** ವಿಷಯ : ಸಮಾಜ ವಿಜ್ಞಾನ

**Code No. : 85-K** **Subject : SOCIAL SCIENCE**

(ಕನ್ನಡ ಭಾಷಾಂತರ / Kannada Version)

(ಹಳೆ ಪಠ್ಯಕ್ರಮ / Old Syllabus)

(ಪುನರಾವರ್ತಿತ ಅಭ್ಯರ್ಥಿ + ಪುನರಾವರ್ತಿತ ಖಾಸಗಿ ಅಭ್ಯರ್ಥಿ / Regular Repeater + Private Repeater)

***ಸಾಮಾನ್ಯ ಸೂಚನೆಗಳು :***

i) ಈ ಪ್ರಶ್ನೋತ್ತರ ಕಿರುಪುಸ್ತಕವು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 56 ಪ್ರಶ್ನೆಗಳನ್ನು ಹೊಂದಿದೆ.

ii) ಪ್ರತಿಯೊಂದು ವಸ್ತುನಿಷ್ಠ ಮಾದರಿ ಪ್ರಶ್ನೆಯ ಉತ್ತರಕ್ಕಾಗಿ ಜಾಗವನ್ನು ನೀಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ, ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.

iii) ವಿಷಯನಿಷ್ಠ ಮಾದರಿ ಪ್ರಶ್ನೆಗಳ ಉತ್ತರಗಳಿಗೆ ಸಾಕಷ್ಟು ಜಾಗವನ್ನು ನೀಡಲಾಗಿದೆ. ಉತ್ತರಗಳನ್ನು ಆಯಾ ಜಾಗಗಳಲ್ಲಿಯೇ ಬರೆಯಿರಿ.

iv) ವಸ್ತುನಿಷ್ಠ ಮಾದರಿ ಮತ್ತು ವಿಷಯನಿಷ್ಠ ಮಾದರಿ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಅನುಸರಿಸಿ.

v) ವಿದ್ಯಾರ್ಥಿಗಳು ಸೀಸದ ಕಡ್ಡಿ (ಪೆನ್ಸಿಲ್) ಯಿಂದ ಉತ್ತರಗಳನ್ನು ಬರೆಯಬಾರದು. ಪೆನ್ಸಿಲ್‌ನಿಂದ ಉತ್ತರ ಬರೆದಲ್ಲಿ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ. (ನಕ್ಷೆಗಳು, ರೇಖಾಚಿತ್ರಗಳು ಮತ್ತು ಭೂಪಟಗಳನ್ನು ಬಿಟ್ಟು).

vi) ಬಹು–ಆಯ್ಕೆ, ಖಾಲಿ ಸ್ಥಳಗಳನ್ನು ಭರ್ತಿ ಮಾಡುವುದು, ಹೊಂದಿಸಿ ಬರೆಯುವ ಪ್ರಶ್ನೆಗಳ ವಿಷಯದಲ್ಲಿ ಕೆರೆದು ಅಳಿಸುವುದು / ತಿದ್ದಿ ಬರೆಯುವುದು / ಗುರುತಿಸುವುದು ಮಾಡಿದಲ್ಲಿ ಮೌಲ್ಯಮಾಪನಕ್ಕೆ ಅನರ್ಹವಾಗುತ್ತದೆ.

vii) ಪ್ರಶ್ನೆ ಪತ್ರಿಕೆಯನ್ನು ಓದಲು 15 ನಿಮಿಷಗಳ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ.

viii) ನಿಮ್ಮ ಪ್ರಶ್ನೋತ್ತರ ಕಿರುಪುಸ್ತಕದ ಬಲಭಾಗದಲ್ಲಿರುವ ಗೆರೆಯ ಪಕ್ಕದ ಖಾಲಿ ಜಾಗದಲ್ಲಿ ಯಾವುದೇ ರೀತಿಯ ಬರಹಗಳನ್ನು ಬರೆಯಬಾರದು.

I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕೆ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ : $15 \times 1 = 15$

1. ರೈತರಿಗೆ ತಮ್ಮ ಭೂಮಿಯ ಮೇಲಿನ ಹಕ್ಕನ್ನು ದೃಢಪಡಿಸಿದ ಕಂದಾಯ ವ್ಯವಸ್ಥೆ
   (A) ರೈತವಾರಿ ಪದ್ಧತಿ (B) ಮಹಲ್ವಾರಿ ಪದ್ಧತಿ
   (C) ಜಮೀನ್ದಾರಿ ಪದ್ಧತಿ (D) ಖಾಯಂ ಗುತ್ತಾ ಪದ್ಧತಿ

2. ಸಂವಿಧಾನದ ಕರಡು ರಚನಾ ಸಮಿತಿಯ ಅಧ್ಯಕ್ಷರಾಗಿದ್ದವರು
   (A) ಡಾ॥ ರಾಜೇಂದ್ರ ಪ್ರಸಾದ್ (B) ಡಾ॥ ಬಿ.ಆರ್. ಅಂಬೇಡ್ಕರ್
   (C) ಸರದಾರ್ ವಲ್ಲಭಭಾಯಿ ಪಟೇಲ್ (D) ಸರೋಜಿನಿ ನಾಯ್ಡು

3. ಗೋವಾ ಪೋರ್ಚುಗೀಸರಿಂದ ವಿಮೋಚನೆಗೊಂಡ ವರ್ಷ
   (A) 1954 (B) 1963
   (C) 1961 (D) 1971

4. 1966 ರಲ್ಲಿ ಚೀನಾದಲ್ಲಿ ನಡೆಸಿದ ಸಾಂಸ್ಕೃತಿಕ ಕ್ರಾಂತಿಯ ಉದ್ದೇಶ
   (A) ಜಪಾನೀಯರನ್ನು ಮಂಚೂರಿಯದಿಂದ ಹೊರಹಾಕುವುದು
   (B) ಮಂಚೂ ದೊರೆಗಳ ಆಡಳಿತವನ್ನು ಕೊನೆಗೊಳಿಸುವುದು
   (C) ಬೌದ್ಧ ದೇವಾಲಯಗಳನ್ನು ನಾಶಪಡಿಸುವುದು ಮತ್ತು ಧಾರ್ಮಿಕ ನಂಬಿಕೆಯುಳ್ಳವರನ್ನು ಕೊಲ್ಲುವುದು
   (D) ಪ್ರಜಾಪ್ರಭುತ್ವವನ್ನು ಸ್ಥಾಪಿಸುವುದು

5. ಜರ್ಮನಿಯ ಸರ್ವಾಧಿಕಾರಿಯಾಗಿದ್ದವನು
   (A) ಹಿಟ್ಲರ್ (B) ಮುಸ್ಸೋಲಿನಿ
   (C) ಡಿಗಾಲ್ (D) ಲೆನಿನ್

6. ಗ್ರಾಮಾಂತರ ಮಹಿಳೆಯರ ವಿಕಾಸಕ್ಕೆ ಅನುವು ಮಾಡಿಕೊಟ್ಟ ಕಾರ್ಯಕ್ರಮ
   (A) ಸ್ವಯಂ ಸಿದ್ಧ (B) ರಾಷ್ಟ್ರೀಯ ಮಹಿಳಾ ವಿಮೋಚನೆ
   (C) ಬಾಲಿಕಾ ಸಮೃದ್ಧಿ ಯೋಜನೆ (D) ಸ್ತ್ರೀ ಶಕ್ತಿ

7. ಮಹಿಳಾ ಸಬಲೀಕರಣ ವರ್ಷವೆಂದು ಸಾರಿದ ವರ್ಷ
   (A) 2001 (B) 2005
   (C) 1998 (D) 2004

8. ಸಾರ್ಕ್ ಸಂಸ್ಥೆಯ ಕೇಂದ್ರ ಕಚೇರಿ ಇರುವ ಸ್ಥಳ

(A) ಕೊಲಂಬೊ (B) ಕಾಠ್ಮಂಡು

(C) ಢಾಕಾ (D) ದೆಹಲಿ

9. ಕೋರಮಂಡಲ ತೀರವು ಅತಿ ಹೆಚ್ಚು ಮಳೆ ಪಡೆಯುವುದು ಈ ಋತುವಿನಲ್ಲಿ

(A) ಬೇಸಿಗೆ ಕಾಲ

(B) ನಿರ್ಗಮನ ಮಾನ್ಸೂನ್ ಮಾರುತಗಳ ಕಾಲ

(C) ಚಳಿಗಾಲ

(D) ನೈರುತ್ಯ ಮಾನ್‌ಸೂನ್ ಕಾಲ

10. ಮ್ಯಾಂಗ್ರೂವ್ ಕಾಡುಗಳಲ್ಲಿರುವ ಬಿಳಲು ಬೇರುಗಳ ಮರಗಳಿಗೆ ಅತ್ಯುತ್ತಮ ಉದಾಹರಣೆ

(A) ಶ್ರೀಗಂಧ (B) ತೇಗ

(C) ಆಲ (D) ಮಾವು

11. ಪೆಟ್ರೋಲಿಯಂನ್ನು ದ್ರವರೂಪದ ಚಿನ್ನ ಎನ್ನಲು ಕಾರಣ

(A) ಸಕಲ ಆರ್ಥಿಕ ಚಟುವಟಿಕೆಗಳಲ್ಲಿ ಬಳಕೆಯಾಗುವುದರಿಂದ

(B) ದ್ರವರೂಪದಲ್ಲಿರುವುದರಿಂದ

(C) ಹೇರಳವಾಗಿ ಸಿಗುವುದರಿಂದ

(D) ಬಂಗಾರ ಬಣ್ಣದಲ್ಲಿರುವುದರಿಂದ

12. ಭಾರತದ ರೂರ್

(A) ಬಿಹಾರ್ (B) ಪಶ್ಚಿಮ ಬಂಗಾಳ

(C) ಛೋಟಾನಾಗಪುರ ಪ್ರಸ್ಥಭೂಮಿ (D) ಝಾರ್ಖಂಡ್

13. ಭಾರತೀಯ ಧಾನ್ಯ ಸಂಗ್ರಹಣಾ ಕೇಂದ್ರವಿರುವುದು

(A) ಮೈಸೂರು (B) ಬೀದರ್

(C) ಗುಲ್ಬರ್ಗಾ (D) ಹಾಪೂರ್

14. ಕೈಗಾರಿಕಾ ವಿನ್ಯಾಸ ಕೇಂದ್ರದ ಸ್ಥಾಪನೆಯ ಉದ್ದೇಶ

(A) ಭಾರತದ ಪರಿಸ್ಥಿತಿಗೆ ಅನುಗುಣವಾಗಿ ಯಂತ್ರೋಪಕರಣಗಳ ವಿನ್ಯಾಸಿಸಲು

(B) ಹಣಕಾಸಿನ ನೆರವು ನೀಡಲು

(C) ಮಾರುಕಟ್ಟೆ ಸೌಲಭ್ಯ ಒದಗಿಸಲು

(D) ತಾಂತ್ರಿಕ ತರಬೇತಿ ನೀಡಲು

15. ಕರ್ನಾಟಕದಲ್ಲಿ ಅಂಕೋಲ ಪ್ರಸಿದ್ಧವಾಗಲು ಕಾರಣ ಅಲ್ಲಿ

(A) ಮಧ್ಯದ ಅಂಗಡಿಗಳ ಮುಂದೆ ಸತ್ಯಾಗ್ರಹಣ ನಡೆಸಲಾಯಿತು

(B) ಅರಣ್ಯ ಸತ್ಯಾಗ್ರಹ ನಡೆಸಲಾಯಿತು

(C) ಉಪ್ಪಿನ ಸತ್ಯಾಗ್ರಹ ನಡೆಸಲಾಯಿತು

(D) ಧ್ವಜ ಸತ್ಯಾಗ್ರಹ ನಡೆಸಲಾಯಿತು

II. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗವನ್ನು ಸೂಕ್ತ ಪದಗಳಿಂದ ತುಂಬಿ ಬರೆಯಿರಿ : $5 \times 1 = 5$

16. ಸಮುದ್ರಯಾನವನ್ನು ಪ್ರೋತ್ಸಾಹಿಸಿದ ಮೊದಲ ದೇಶ .......................... .

17. ಭಾರತದಲ್ಲಿಯೇ ಅತಿ ಹೆಚ್ಚು ಮಳೆ ಪಡೆಯುವ ಪ್ರದೇಶ .......................... .

18. ಸರಕುಗಳನ್ನು ಸರಕುಗಳಿಗೆ ವಿನಿಮಯ ಮಾಡಿಕೊಳ್ಳುವುದಕ್ಕೆ ಹೀಗೆ ಹೇಳುವರು ............. .

19. ಭ್ರಷ್ಟಾಚಾರ ನಿರ್ಮೂಲನೆಗೆ ಸರ್ಕಾರ ರಚಿಸಿದ ಸಂಸ್ಥೆ .......................... .

20. 2002 ರಲ್ಲಿ ಅಮೆರಿಕಾವು ಅಫಘಾನಿಸ್ತಾನದಲ್ಲಿ ಸೋಲಿಸಿದ ಸಂಘಟನೆ ...................... .

III. 21. ಈ ಕೆಳಗಿನ ***A* ಪಟ್ಟಿ**ಯಲ್ಲಿರುವ ಅಂಶಗಳಿಗೆ ಸರಿಹೊಂದುವ ಉತ್ತರಗಳನ್ನು ***B* ಪಟ್ಟಿ**ಯಿಂದ ಆರಿಸಿ, ಕ್ರಮಾಕ್ಷರದೊಂದಿಗೆ ಉತ್ತರಕ್ಕೆ ಮೀಸಲಿಟ್ಟ ಜಾಗದಲ್ಲಿಯೇ ಬರೆಯಿರಿ : $5 \times 1 = 5$

| ***A* ಪಟ್ಟಿ** | ***B* ಪಟ್ಟಿ** |
|---|---|
| a) ಆರ್ಯಸಮಾಜ | i) ಜ್ಯೋತಿಬಾ ಪುಲೆ |
| b) ಸತ್ಯಶೋಧಕ ಸಮಾಜ | ii) 1950 |
| c) ಅಲಿಘರ್ ಚಳುವಳಿ | iii) ಸ್ವಾಮಿ ದಯಾನಂದ ಸರಸ್ವತಿ |
| d) ಭಾರತದ ಸಂವಿಧಾನ ಜಾರಿಗೆ ಬಂದ ವರ್ಷ | iv) ಸರ್ ಸಯ್ಯದ್ ಅಹಮ್ಮದ್ ಖಾನ್ |
| e) ಭಾರತದಲ್ಲಿ ರಿಸರ್ವ್ ಬ್ಯಾಂಕನ್ನು ಸ್ಥಾಪಿಸಿದ ವರ್ಷ | v) ಕ್ರಿ.ಶ. 1947 ರ ಭಾರತ ಸ್ವಾತಂತ್ರ್ಯದ ಶಾಸನ |
| | vi) ಕ್ರಿ.ಶ. 1935 ರ ಭಾರತ ಸರ್ಕಾರದ ಶಾಸನ |
| | vii) ಡಾ॥ ಆತ್ಮಾರಾಂ ಪಾಂಡುರಂಗ |
| | viii) ಸ್ವಾಮಿ ವಿವೇಕಾನಂದ |

IV. ಈ ಕೆಳಗಿನ ಪ್ರಶ್ನೆಗಳಿಗೆ ***ಒಂದೊಂದು*** ವಾಕ್ಯದಲ್ಲಿ ಉತ್ತರ ಬರೆಯಿರಿ : 9 × 1 = 9

22. 'ಆಧುನಿಕ ಮೈಸೂರು ನಿರ್ಮಾಪಕ' ಎಂದು ಯಾರನ್ನು ಕರೆಯುತ್ತಾರೆ ?

23. ಮಂಚು ಆಡಳಿತವನ್ನು ಕೊನೆಗೊಳಿಸಿದ ಚೀನಾದ ನಾಯಕನಾರು ?

24. ಎರಡನೇ ವಿಶ್ವ ಸಮರದಲ್ಲಿ ಅಮೆರಿಕಾ ಭಾಗಿಯಾಗಿದ್ದೇಕೆ ?

25. ವೀಟೋ ಅಧಿಕಾರ ಎಂದರೇನು ?

26. ಅಮೆರಿಕಾದ ಗಾಂಧಿ ಎಂದು ಪ್ರಸಿದ್ಧರಾಗಿರುವವರು ಯಾರು ?

27. ಮಾನವ ಹಕ್ಕುಗಳು ಏಕೆ ಅವಶ್ಯಕವಾಗಿವೆ ?

28. ಸುಂದರಬನಗಳಿಗೆ ಆ ಹೆಸರು ಹೇಗೆ ಬಂತು ?

29. ತಲಮಾರ್ಜನ ಅಥವಾ ನಿಕರ್ಷಣ ಎಂದರೇನು ?

30. ಹಸಿರು ಕ್ರಾಂತಿ ಎಂದರೇನು ?

V. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ***ಎರಡು*** ವಾಕ್ಯಗಳಲ್ಲಿ ಉತ್ತರ ಬರೆಯಿರಿ : 16 × 2 = 32

31. ಮದ್ರಾಸ್ ಒಪ್ಪಂದದ ಷರತ್ತುಗಳೇನು ?

32. ರಣಜಿತ್ ಸಿಂಗ್‌ನನ್ನು ಸಿಖ್ಖರ ಪ್ರಸಿದ್ಧ ದೊರೆಯೆಂದು ಏಕೆ ಕರೆಯುವರು ?

33. ಬ್ರಿಟಿಷ್ ಆಡಳಿತ ಸಮಯದಲ್ಲಿ ಭಾರತೀಯರಲ್ಲಿ ಸಾರಿಗೆ ಸಂಪರ್ಕವು ಐಕ್ಯತೆಯ ಭಾವವನ್ನು ಹೇಗೆ ಮೂಡಿಸಿತು ?

34. ಈಸೂರಿನಲ್ಲಿ ನಡೆದ ಕ್ವಿಟ್ ಇಂಡಿಯಾ ಚಳುವಳಿಯನ್ನು ವಿವರಿಸಿ.

35. ಸಂದಾರ್ ಪಟೇಲರು ಹೈದರಾಬಾದಿನ ಮೇಲೆ ಪೊಲೀಸ್ ಕಾರ್ಯಾಚರಣೆಯನ್ನು ಕೈಗೊಳ್ಳಲು ಕಾರಣವೇನು ?

36. ಒಂದನೇ ಮಹಾಯುದ್ಧದ ಪ್ರತಿಸ್ಪರ್ಧಿ ಮೈತ್ರಿಕೂಟಗಳ ಪದ್ಧತಿಯನ್ನು ವಿವರಿಸಿ.

37. ಅಗ್‌ಮಾರ್ಕ್‌ನ್ನು ಏಕೆ ಕಡ್ಡಾಯಗೊಳಿಸಲಾಗಿದೆ ?

38. ವಿಶ್ವಸಂಸ್ಥೆಯ ಪ್ರಮುಖ ಅಂಗ ಸಂಸ್ಥೆಗಳನ್ನು ತಿಳಿಸಿ.

39. ಭಾರತದ ಸಂವಿಧಾನದಲ್ಲಿ ಮಾನವ ಹಕ್ಕುಗಳನ್ನು ಹೇಗೆ ಸಂರಕ್ಷಿಸಲಾಗಿದೆ ?

40. ಪಶ್ಚಿಮ ತೀರ ಮತ್ತು ಪೂರ್ವ ತೀರಗಳಿಗಿರುವ ವ್ಯತ್ಯಾಸಗಳನ್ನು ತಿಳಿಸಿ.

41. ಬಾಕ್ಸೈಟ್ ಅದಿರಿನ ಉಪಯೋಗಗಳನ್ನು ತಿಳಿಸಿ.

42. ಸಿಮೆಂಟ್ ಬಳಕೆ ಒಂದು ದೇಶದ ಅಭಿವೃದ್ಧಿಯ ಸಂಕೇತ. ಹೇಗೆ ?

43. ಇತೀಚೆಗೆ ಒಳನಾಡಿನ ಜಲಸಾರಿಗೆ ತನ್ನ ಪ್ರಾಮುಖ್ಯತೆಯನ್ನು ಏಕೆ ಕಳೆದುಕೊಳ್ಳುತ್ತಿದೆ ?

44. ಸಣ್ಣ ಪ್ರಮಾಣದ ಕೈಗಾರಿಕೆಗಳು ಹೇಗೆ ಕಾರ್ಯ ನಿರ್ವಹಿಸುತ್ತಿವೆ ?

45. ಮೂರನೇ ಪಂಚವಾರ್ಷಿಕ ಯೋಜನೆಯ ವಿಫಲತೆಗೆ ಕಾರಣಗಳೇನು ?

46. ಅಲಿಪ್ತ ಚಳುವಳಿಯ ನಾಯಕರಾರು ?

VI. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ **ಆರು** ವಾಕ್ಯಗಳಲ್ಲಿ ಉತ್ತರಿಸಿ : $6 \times 3 = 18$

47. ಭಾರತದಲ್ಲಿ ಪೋರ್ಚುಗೀಸರ ಅಧಿಕಾರದ ಅವನತಿಗೆ ಕಾರಣಗಳೇನು ?

48. 1857 ರ ದಂಗೆಯ ವಿಫಲತೆಗೆ ಕಾರಣಗಳೇನು ?

49. ಮಹಿಳೆಯರ ವಿಕಾಸಕ್ಕೆ ಸರ್ಕಾರ ಯಾವ ಕ್ರಮಗಳನ್ನು ಕೈಗೆತ್ತಿಕೊಂಡಿದೆ ?

50. ಮಣ್ಣಿನ ಸವಕಳಿಯನ್ನು ತಡೆಗಟ್ಟುವ ವಿಧಾನಗಳನ್ನು ತಿಳಿಸಿ.

51. ಮಿಶ್ರ ಬೇಸಾಯವು ವಾಣಿಜ್ಯ ಬೇಸಾಯಕ್ಕಿಂತ ಭಿನ್ನವಾಗಿದೆ. ಹೇಗೆ ?

52. ಚಿಲ್ಲರೆ ವ್ಯಾಪಾರಿಗಳ ಸೇವೆಗಳು ಯಾವುವು ?

VII. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ***ಎಂಟು*** ವಾಕ್ಯಗಳಲ್ಲಿ ಉತ್ತರಿಸಿ : $3 \times 4 = 12$

53. ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸುಭಾಷ್‌ಚಂದ್ರ ಬೋಸರ ಪಾತ್ರವನ್ನು ವಿವರಿಸಿ.

54. ಭಾರತವು ರಷ್ಯಾದ ಜೊತೆ ಒಳ್ಳೆಯ ಸಂಬಂಧವನ್ನು ಕಾಯ್ದುಕೊಳ್ಳುತ್ತಿದೆ. ವಿವರಿಸಿ.

55. ಭಾರತದ ವ್ಯವಸಾಯ ಹಿಂದುಳಿದಿರಲು ಕಾರಣವೇನು ?

VIII. 56. ಭಾರತದ ನಕ್ಷೆಯನ್ನು ಬರೆದು, ಈ ಕೆಳಗಿನವುಗಳನ್ನು ಗುರುತಿಸಿ : $1 + 3 = 4$

a) ಕಾವೇರಿ ನದಿ

b) ಭಾಕ್ರಾ ನಂಗಲ್ ಯೋಜನೆ

c) ಕಾಂಡ್ಲಾ

***ಪರ್ಯಾಯ ಪ್ರಶ್ನೆ :*** **ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಮಾತ್ರ (ಪ್ರಶ್ನೆ ಸಂಖ್ಯೆ 56ಕ್ಕೆ ಬದಲಾಗಿ)**

ಭಾರತೀಯರ ಜನಜೀವನದ ಮೇಲೆ ಹಿಮಾಲಯ ಪರ್ವತ ಶ್ರೇಣಿಗಳು ಬೀರುವ ಪ್ರಮುಖ ಪಾತ್ರವೇನು ? 4